# ಫೆ.1 ರಿಂದ ಮಜಾ ಟಾಕೀಸ್ ಹೊಸ ಸೀಸನ್ ಬರ್ತಿದೆ!

**ಹೊಸ ತಂಡದೊಂದಿಗೆ ನಿಮ್ಮ ಮನಸಿಗೆ ಲಗ್ಗೆಯಿಡಲು ಸಜ್ಜಾಗಿರುವ ಮಜಾ ಟಾಕೀಸಿನ ಹೊಸ ಸೀಸನ್ ಹೊಸ ಚೈತನ್ಯ ಮತ್ತು ಕೊನೆಯಿರದ ಕಚಗುಳಿಯನ್ನು ಹೊತ್ತು ತರಲಿದೆ.**

ನಗೆಗಡಲಿನಲ್ಲಿ ಮುಳುಗೇಳಲು ಸಿದ್ಧರಾಗಿ! ಯಾಕೆಂದರೆ ಮಜಾ ಟಾಕೀಸಿನ ಬಹು ನಿರೀಕ್ಷಿತ ಹೊಸ ಸೀಸನ್ ಶುರುವಾಗುತ್ತಿದೆ. ಈ ಹೊಸ ಸೀಸನ್ನಿನ ವಿಶೇಷವೆಂದರೆ ಹೊಸ ಮುಖಗಳು. ಫೆಬ್ರವರಿ ಒಂದನೇ ತಾರೀಖಿನಿಂದ ಆರಂಭಗೊಳ್ಳಲಿರುವ ಈ ವಾರಾಂತ್ಯದ ಕಚಗುಳಿ ನಿಮ್ಮ ಶನಿವಾರ ಮತ್ತು ಭಾನುವಾರಗಳನ್ನು ಬೆಳಗುವುದು ಖಚಿತ. ತಡೆಯಲಾಗದಷ್ಟು ತಮಾಷೆ, ಲವಲವಿಕೆಯ ಹರಟೆ ಮತ್ತು ಸಂಪೂರ್ಣ ಮನರಂಜನೆಯ ಭರವಸೆ ಇಲ್ಲಿದೆ.

ಕನ್ನಡ ಮನರಂಜನಾ ರಂಗದ 'ಟಾಕಿಂಗ್ ಸ್ಟಾರ್' ಸೃಜನ್ ಲೋಕೇಶ್ ಎಂದಿನಂತೆ ಈ ಮಾತಿನ ಹಬ್ಬದ ಸಾರಥ್ಯ ವಹಿಸಿದ್ದಾರೆ. ಮೂರು ಯಶಸ್ವೀ ಸೀಸನ್ನುಗಳನ್ನು ನಡೆಸಿಕೊಟ್ಟು ಕರ್ನಾಟಕದ ಮನೆಮಾತಾಗಿರುವ ಸೃಜನ್ ಅವರ ಮಾತೆಂದರೆ ಮಕ್ಕಳಿಂದ ಹಿರಿಯರವರೆಗೆ ಎಲ್ಲರಿಗೂ ಅಚ್ಚುಮೆಚ್ಚು. ಈಗ ಅವರೊಂದಿಗೆ ಮತ್ತೊಬ್ಬ ಮಾತಿನ ವೀರ ಯೋಗರಾಜಭಟ್ ಕೂಡ ಸೇರಿಕೊಂಡಿದ್ದಾರೆ ಎಂದರೆ ಈ ಹೊಸ ಸೀಸನ್ನಿನ ಮಜವೇ ಬೇರೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗೇ ಇಲ್ಲ. ಜನಪ್ರಿಯ ನಿರ್ದೇಶಕ ಯೋಗರಾಜಭಟ್ಟರು ಈ ಸೀಸನ್ನಿನುದ್ದಕ್ಕೂ ವಿಶೇಷ ಅತಿಥಿಯಾಗಿ ಇರುತ್ತಾರೆ. ಭಟ್ಟರ ಚುರುಕು ಮಾತು ಹಾಗೂ ಒಳನೋಟಗಳು ವೀಕ್ಷಕರನ್ನು ಮತ್ತಷ್ಟು ರಂಜಿಸುವುದರಲ್ಲಿ ಅನುಮಾನವಿಲ್ಲ.

ಸೃಜನ್ ಜೊತೆಗೆ ಅವರ ಪ್ರಿಯ ಸಂಗಾತಿಗಳಾದ ಕುರಿಪ್ರತಾಪ್, ವಿಶ್ವ ಮತ್ತು ಪವನ್ ಕುಮಾರ್ ಕೂಡ ನಿಮ್ಮನ್ನು ನಗಿಸಲು ಕಾದಿದ್ದಾರೆ. ಮಜಾ ಟಾಕೀಸ್ ಎಂಬ ಹೆಸರಿನೊಂದಿಗೇ ಬೆರೆತು ಹೋಗಿರುವ ಮೂರು ಪಾತ್ರಗಳು ಇವು. ಅವರ ಹಾವಭಾವಗಳು, ಚೇಷ್ಟೆಗಳು, ಅನುಕರಿಸಲಾಗದ ಟೈಮಿಂಗ್ ವೀಕ್ಷಕರಿಗೆ ಮಜ ನೀಡಲಿವೆ.



ಇಷ್ಟೇ ಅಲ್ಲ, ಈ ಹೊಸ ಸೀಸನ್ನಿನಲ್ಲಿ ಮತ್ತಷ್ಟು ಹೊಸ ಮುಖಗಳು ನಿಮ್ಮ ಹೊಟ್ಟೆ ಹುಣ್ಣಾಗಿಸಲು ಪಣ ತೊಟ್ಟಿವೆ. ದೀಪಾ ಭಾಸ್ಕರ್, ಮಿಮಿಕ್ರಿ ಗೋಪಿ ಮತ್ತು ಅಗ್ನಿಸಾಕ್ಷಿ ಖ್ಯಾತಿಯ ಪ್ರಿಯಾಂಕಾ ಕೂಡ ಇಲ್ಲಿ ನಿಮಗೆ ಸಿಗುತ್ತಾರೆ. ಈ ಹೊಸ ಮುಖಗಳಿಂದಾಗಿ ಮಜಾ ಟಾಕೀಸಿಗೆ ಹೊಸ ಆಯಾಮವೇ ದೊರಕಲಿದೆ.

ಇವರೆಲ್ಲರ ಜೊತೆಗೆ ನಿರ್ದೇಶಕನಾಗೋ ಕನಸು ಹೊತ್ತ ತುಕಾಲಿ ಸಂತೋಷ್, ಸೋಶಿಯಲ್ ಮಿಡಿಯಾ ಸೆನ್ಸೇಷನ್ ಆಗಿ ಪಿಕೆ ಮತ್ತು ಪಕ್ಕದ್ಮನೆ ಕಿರಿಕಿರಿ ಅಜ್ಜಿಯಾಗಿ ಚಂದ್ರಪ್ರಭ ಕೂಡ ಇದ್ದಾರೆಂದರೆ ಈ ಸಲದ ಮಜಾ ಟಾಕೀಸಿನಲ್ಲಿ ಮಜ ಎಷ್ಟು ಪಟ್ಟು ಹೆಚ್ಚಲಿದೆ ಎಂಬುದನ್ನು ನೀವೇ ಊಹಿಸಿಕೊಳ್ಳಿ.

ಮನೆಯೊಳಗಿನ ಪಾತ್ರಗಳಷ್ಟೇ ಅಲ್ಲದೆ, ಈ ಸಲ ಮಜಾ ಮನೆಗೆ ಬರುವ ಅತಿಥಿಗಳ ಪಟ್ಟಿಯೂ ನೂತನವಾಗಿದೆ. ಸಿನಿಮಾ ತಾರೆಗಳಷ್ಟೇ ಅಲ್ಲದೆ ಕ್ರೀಡಾ ತಾರೆಗಳು, ರಾಜಕಾರಣಿಗಳು, ಜನಪ್ರಿಯ ಸಾಧಕರುಗಳು ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ನೀವಿಲ್ಲಿ ಭೇಟಿಯಾಗಬಹುದು.

ಜೊತೆಗೆ ಸೃಜನ್ ಅವರ ಮಜಾ ಮನೆಯೂ ಈ ಸಲ ಹೊಸ ಅವತಾರದಲ್ಲಿ ಕಂಗೊಳಿಸುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಜಾಹಿರಾತು ವೀಡಿಯೋ ಮಜಾ ಟಾಕೀಸಿನ ಹೊಸ ಸೀಸನ್ನಿನ ಬಗ್ಗೆ ಕುತೂಹಲ ಹುಟ್ಟಿಹಾಕಿರುವುದು ನಿಜ. ಹೊಸ ಸೀಸನ್ನಿನ ಆರಂಭಕ್ಕಾಗಿ ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ. ತಾರೆಗಳು ಮತ್ತು ತಮಾಷೆಗಳ ಪರಿಪೂರ್ಣ ಸಂಗಮವಾದ ಮಜಾಟಾಕೀಸ್ ಕೊನೆಯಿರದ ಮನರಂಜನೆಯನ್ನು ಹೊತ್ತು ನಿಮ್ಮ ಮುಂದೆ ಬರಲು ಸಕಲ ಸಿದ್ಧತೆ ನಡೆಸಿದೆ.

ಫೆಬ್ರವರಿ ಒಂದರ ಸಂಜೆ ಕಲರ್ಸ್ ಕನ್ನಡದಲ್ಲಿ ಮಜಾಟಾಕೀಸಿನ ಹೊಸ ಸೀಸನ್ನಿನ ಶುರುವನ್ನು ತಪ್ಪದೆ ನೋಡಿ. ಎಲ್ಲ ಕಷ್ಟ ಕೋಟಲೆಗಳನ್ನು ಬದಿಗಿಟ್ಟು ಹೊಟ್ಟೆ ತುಂಬ ನಗಲು ತಯಾರಾಗಿ.